ಮಂಜೂರು ಮಾಡಲಾಗಿದೆ. ವಿದ್ಯಾರ್ಥಿನಿಲಯಗಳ ಬೇಡಿಕೆ ಮತ್ತು ವಿದ್ಯಾರ್ಥಿಗಳ ಲಭ್ಯತೆ ಆಧಾರದ ಮೇಲೆ ಈ ಹಾಸ್ಟೆಲ್‌ಗಳನ್ನು ಮಂಜೂರು ಮಾಡಲಾಗಿದೆಯೆಂದು ಸರ್ಕಾರ ಹೇಳಿದೆ. ನನ್ನ ಮತ ಕ್ಷೇತ್ರದ ಶಿಗ್ಗಾಂ ತಾಲ್ಲೂಕು ನಾರಾಯಣಪುರ ಮತ್ತು ಸವಣೂರು ತಾಲ್ಲೂಕು ಕಡಕೋಳದಲ್ಲಿ ವಿದ್ಯಾರ್ಥಿಗಳ ಲಭ್ಯತೆ ಆಧಾರದ ಮೇಲೆ ಹಾಸ್ಟೆಲ್‌ಗಳು ಬೇಕೆಂದು ನಾನು ಬೇಡಿಕೆ ಸಲ್ಲಿಸಿದ್ದೆ. 235 ಹಾಸ್ಟೆಲ್ ಕೊಟ್ಟಿರುವಾಗ, ಒಂದು ವಿಧಾನಸಭಾ ಕ್ಷೇತ್ರಕ್ಕೆ ಒಂದೊಂದು ಹಾಸ್ಟೆಲ್ ಕೊಟ್ಟಿದ್ದರೂ ಇನ್ನೂ ಉಳಿಯುತ್ತಿತ್ತು. ಆದ್ದರಿಂದ, ಇವತ್ತು ಹಾಸ್ಟೆಲ್‌ಗಳನ್ನು ಸರಿಯಾದ ರೀತಿಯಲ್ಲಿ ಹಂಚಿಲ್ಲವೆಂಬ ವಿಚಾರವನ್ನು ಹೇಳುತ್ತಾ, ನಮ್ಮ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಲಭ್ಯತೆ ಇರುವುದರಿಂದ ನನ್ನ ಬೇಡಿಕೆಗೆ ಅನುಸಾರವಾಗಿ ಹಾಸ್ಟೆಲ್‌ಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಂ.ಕೃಷ್ಣರೆಡ್ಡಿ:- ಮಾನ್ಯ ಸದಸ್ಯರ ಬೇಡಿಕೆಯಂತೆ ಈ ಸಲ ಅವರ ಕ್ಷೇತ್ರದಲ್ಲಿ ಹಾಸ್ಟೆಲ್‌ನ್ನು ಪ್ರಾರಂಭಿಸಲಾಗುತ್ತದೆ.

ಶ್ರೀ ಎ.ಯೋಗೇಶ್ ಭಟ್:- ಇದರ ಬಗ್ಗೆ ಒಂದು ಸ್ಪಷ್ಟೀಕರಣ ಕೇಳಬೇಕಾಗಿದೆ. ಇಷ್ಟು ವರ್ಷಗಳಿಂದ ಅರ್ಧದಲ್ಲಿ ನಿಂತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳು ಎಷ್ಟು ಇವೆಯೆಂದು ಸರ್ಕಾರ ಒಂದು ವಿವರಣೆಯನ್ನು ಕೊಡಬೇಕಾಗಿತ್ತು. ಸುಮಾರು ಒಂದೂವರೆ ವರ್ಷಗಳ ಹಿಂದೆ ಮಂಗಳೂರಿಗೆ ಮಾನ್ಯ ಸಚಿವರು ಬಂದಿದ್ದಾಗ, ಅಲ್ಲಿ ಒಂದು ಪರಿಶಿಷ್ಟ ವರ್ಗದ ಹಾಸ್ಟೆಲನ್ನು ಉದ್ಘಾಟನೆ ಮಾಡಿದ್ದರು, ಅಲ್ಲಿಂದ ಇಲ್ಲಿಯವರೆಗೆ ವಿದ್ಯಾರ್ಥಿಗಳು ಅಲ್ಲಿ ಇರುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿದ್ದರೂ ಇನ್ನೂ ಮಾಡಿಲ್ಲ. ಸನ್ಮಾನ್ಯ ರಮೇಶ್ ಜಿಗಜಿಣಗಿಯವರು ಸ್ವತಃ ಅಲ್ಲಿಗೆ ಭೇಟಿ ಕೊಟ್ಟು ಬಂದಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ:- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಮಾಹಿತಿ ಒದಗಿಸಿದರೆ, ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಹೇಳಿದ ಸಂದರ್ಭದಲ್ಲಿ ನಾನು ಮಂತ್ರಿಯಾಗಿರಲಿಲ್ಲ.

ವಿಷಯ:- ವೈಜ್ಞಾನಿಕವಾಗಿ ಮನೆಗಂದಾಯ ನಿಗದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 72 (286)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಪುರಸಭೆ: ನಗರಸಭೆಗಳಲ್ಲಿ ವೈಜ್ಞಾನಿಕವಾಗಿ ಮನೆ ಕಂದಾಯ ನಿಗಧಿಪಡಿಸಲು ಸಮಿತಿ ನೇಮಿಸಲಾಗಿದೆಯೇ?

2) ಆ ಸಮಿತಿ ಮನೆಗಂದಾಯ ನಿಗಧಿಪಡಿಸಲು ಯಾವುದಾದರೂ ಸೂತ್ರ ತಿಳಿಸಿದಿಯೇ?

3) ಶಿವಮೊಗ್ಗ ನಗರಸಭೆಯ ಕಂದಾಯ ಪರಿಷ್ಕರಣೆ ಅಧಿಕಾರಿಗಳು ನಡೆಸುತ್ತಿರುವ ಭ್ರಷ್ಟಾಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್ (ಪೌರಾಡಳಿತ ಸಚಿವರು):-

1) ಇಲ್ಲ. ಆದರೆ ಇದೇ ವಿಷಯದ ಬಗ್ಗೆ ಬೆಂಗಳೂರು ನಗರ ಪಾಲಿಕೆಗೆ ಸಂಬಂಧಿಸಿದಂತೆ ಒಂದು ಸಮಿತಿ ರಚಿಸಲಾಗಿದೆ.

2) ಬೆಂಗಳೂರು ನಗರಪಾಲಿಕೆಗೆ ಸಂಬಂಧಿಸಿದಂತೆ ರಚಿಸಲಾಗಿರುವ ಸಮಿತಿಯು ಸೂತ್ರಗಳನ್ನು ತಿಳಿಸಿದೆ.

3) ಹೌದು.

4) ತೆರಿಗೆ ಪರಿಷ್ಕರಣೆ ಕೆಲಸವನ್ನು ನಿಲ್ಲಿಸಲಾಗಿದೆ ಮತ್ತು ಈ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳಿಂದ ವಿಚಾರಣೆಗೆ ಆದೇಶ ನೀಡಲಾಗಿದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಪುರಸಭೆ ಮತ್ತು ನಗರ ಸಭೆ ವ್ಯಾಪ್ತಿಯಲ್ಲಿರತಕ್ಕಂಥ ಮನೆಗಳಿಗೆ ಕಂದಾಯ ನಿಗದಿ ಮಾಡಲು ಸರಿಯಾದ ಸೂತ್ರವಿಲ್ಲ. ಮನೆ ಕಂದಾಯ ನಿಗದಿ ಮಾಡುವ ಬಗ್ಗೆ ಶಿಫಾರಸ್ ಮಾಡಲು ಒಂದು ಸಮಿತಿಯನ್ನು ನೇಮಿಸಲಾಗಿತ್ತದಯೇ ಎಂದು ನಾನು 7 ವರ್ಷಗಳಿಂದಲೂ ಕೇಳುತ್ತಾ ಬಂದಿದ್ದೇನೆ, ಇದುವರೆಗೂ ಸಮಿತಿಯನ್ನು ನೇಮಿಸಿಲ್ಲ. ಒಂದೇ ತರಹದ ಮನೆಗಳು ಅಕ್ಕಪಕ್ಕದಲ್ಲಿ ಇದ್ದರೂ ಒಂದು ಮನೆಗೆ 5 ಸಾವಿರ ಮತ್ತು ಇನ್ನೊಂದು ಮನೆಗೆ 50 ರೂಪಾಯಿ ಕಂದಾಯವನ್ನು ನಿಗದಿ ಮಾಡಿರುವ ಉದಾಹರಣೆಗಳಿವೆ. ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿ ಮನೆ ಕಂದಾಯ ನಿಗದಿ ಮಾಡುವ ಬಗ್ಗೆ ಒಂದು ಸಮಿತಿ ಮಾಡಲಾಗಿತ್ತು, ಆ ಸಮಿತಿ ವರದಿ ಕೊಟ್ಟಿದೆಯೆಂದು ಸರ್ಕಾರ ಹೇಳಿದೆ. ಆ ಸಮಿತಿಯವರು ಕೊಟ್ಟಿರುವ ಸೂತ್ರವನ್ನೇ ಇಡೀ ರಾಜ್ಯದಲ್ಲಿ ಮನೆ ಕಂದಾಯವನ್ನು ವಸೂಲಿ ಮಾಡಲು ಅಳವಡಿಸಲಾಗುತ್ತದೆಯೇ ಎಂದು ಕೇಳಲು ಇಷ್ಟಪಡುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಅಳವಡಿಸಿಕೊಂಡಿರುವ ಸೂತ್ರವನ್ನೇ ಇಡೀ ರಾಜ್ಯಕ್ಕೆ ಅಳವಡಿಸಲಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚೆ ಮಾಡಿ ಏನು ಮಾಡಬೇಕೆಂದು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಶಿವಮೊಗ್ಗ ನಗರದಲ್ಲಿ ಮನೆ ಕಂದಾಯ ನಿಗದಿ ಮಾಡುವುದಕ್ಕಾಗಿ 6 ಜನ ಅಧಿಕಾರಿಗಳು ಬೆಂಗಳೂರಿನಿಂದ ನೇಮಕವಾಗಿ ಹೋಗಿದ್ದಾರೆ. ಈ 6 ಜನ ಅಧಿಕಾರಿಗಳು ಒಂದು ಲಾಡ್ಜ್‌ನಲ್ಲಿ ರೂಮ್ ಮಾಡಿಕೊಂಡು ಖಾತೆದಾರರನ್ನು

ಹೋಟೆಲ್‌ಗೆ ಕರೆಸಿಕೊಂಡು ಯಾರು ಹೆಚ್ಚಿಗೆ ದುಡ್ಡು ಕೊಡುತ್ತಾರೋ ಅವರಿಗೆ ಕಡಿಮೆ ಕಂದಾಯವನ್ನು ಫಿಕ್ಸ್ ಮಾಡುತ್ತಿದ್ದಾರೆ. ಈ ಭ್ರಷ್ಟಾಚಾರದ ಆರೋಪ ಬಂದ ಮೇಲೆ, ಕಂದಾಯ ನಿಗದಿ ಮಾಡುವ ಕೆಲಸವನ್ನು ನಿಲ್ಲಿಸಿದ ಮೇಲೂ ಅವ್ಯವಹಾರಗಳು ನಡೆಯುತ್ತಿದ್ದ ಆಧಾರದ ಮೇಲೆ ಲೋಕಾಯುಕ್ತದವರು ಅಲ್ಲಿಗೆ ಹೋಗಿ ಆ ಅಧಿಕಾರಿಗಳನ್ನು ಅರೆಸ್ಟ್ ಮಾಡಿ ದಾಖಲೆಗಳನ್ನು ಸೀಸ್ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈಗ ಕಂದಾಯ ವಸೂಲಿ ಮಾಡುವುದನ್ನು ನಿಲ್ಲಿಸಿರುವುದರಿಂದ ಪುರಸಭೆ ಮತ್ತು ನಗರಸಭೆಗಳಿಗೆ ಹಣ ಬರುತ್ತಿಲ್ಲ. ಆದುದರಿಂದ, ಈಗಾಗಲೇ ನಿಗದಿಯಾಗಿರುವ ಕಂದಾಯದ ಮೇಲೆ ರೆಸಿಡೆನ್ಷಿಯಲ್‌ಗಳಿಗೆ 10 ಪರ್‌ಸೆಂಟ್ ಮತ್ತು ಕಮರ್ಷಿಯಲ್ ಮೇಲೆ 20 ಪರ್‌ಸೆಂಟ್ ಜಾಸ್ತಿ ಹಾಕಿ ವಸೂಲಿ ಮಾಡಿದರೆ, ಸರ್ಕಾರಕ್ಕೆ ಹಣವೂ ಬರುತ್ತದೆ, ಜೊತೆಗೆ ಭ್ರಷ್ಟಾಚಾರವೂ ಇರುವುದಿಲ್ಲ. ಈ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕರಪ್‌ಷನ್ ವಿಷಯ ಸರ್ಕಾರದ ಗಮನಕ್ಕೆ ಬಂದ ತಕ್ಷಣ ಅಸೆಸ್‌ಮೆಂಟ್ ಕೆಲಸವನ್ನು ನಿಲ್ಲಿಸಬೇಕೆಂದು ಸೂಚನೆ ಕೊಟ್ಟು, ಕರಪ್‌ಷನ್ ನಡೆದಿದೆಯೇ ಇಲ್ಲವೇ ಎಂಬ ಬಗ್ಗೆ ತನಿಖೆ ಮಾಡಿ ವರದಿ ಕೊಡಬೇಕೆಂದು ಜಿಲ್ಲಾಧಿಕಾರಿಯವರಿಗೆ ಕೇಳಿದ್ದೇನೆ. ಎನ್‌ಕ್ವೈರಿ ರಿಪೋರ್ಟ್ ಬಂದ ತಕ್ಷಣ ತಪ್ಪಿತಸ್ತರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆಯನೂರು ಮಂಜುನಾಥ್:- ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರಸಭೆ ವ್ಯಾಪ್ತಿಗೆ ಹೊಸ ನಗರದ ಬಹು ಭಾಗಗಳೂ ಸೇರುತ್ತವೆ, ಲೋಕಾಯುಕ್ತದವರು ದಾಳಿ ಮಾಡಿ ಅವರನ್ನು ಹಿಡಿದರು ಎಂದರೆ ಅದರ ಅರ್ಥ? ಕಂದಾಯ ನಿಗದಿ ಮಾಡಬಾರದೆಂದು ಸರ್ಕಾರ ಆದೇಶ ಕೊಟ್ಟಾದ ಮೇಲೂ ಹಳೆಯ ಡೇಟ್‌ನಲ್ಲಿ ಮನೆ ಕಂದಾಯ ಫಿಕ್ಸ್ ಮಾಡಲು ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಮೇಲ್ನೋಟಕ್ಕೆ ಸಾಬೀತಾಗಿದೆ. ತಾತ್ಕಾಲಿಕವಾಗಿ ಅಸೆಸ್‌ಮೆಂಟ್ ನಿಲ್ಲಿಸಬೇಕೆಂದು ಸರ್ಕಾರ ಆದೇಶ ಕೊಟ್ಟಿದ್ದರೂ ಆ ಆದೇಶ ಉಲ್ಲಂಘನೆ ಮಾಡಿ ಹಳೇ ಡೇಟ್ ಹಾಕಿ ಕೆಲಸ ಮಾಡಿರುವವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ?

12.40 ಪಿ.ಎಂ

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್:- ಮಾನ್ಯ ಸದಸ್ಯರು ಈ ತರಹ ನಡೆಯುತ್ತಿದೆ ಎಂದು ಹೇಳಿ ನನ್ನ ಜೊತೆಗೆ ಡಿಸ್‌ಕಸ್ ಮಾಡಿದರು. ಆದರೆ ನಾನು ಅವರು ಹೇಳಿದ ತತ್‌ಕ್ಷಣವೇ ಸಂಬಂಧಪಟ್ಟ ಆರ್ಡರ್‌ನ್ನು ಸ್ಟಾಪ್ ಮಾಡುವುದಕ್ಕೆ ಕಳುಹಿಸಿಬಿಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅವರು ಆರ್ಡರನ್ನು ಕೊಟ್ಟಿದ್ದರೂ ಕೂಡ ಆ ತರಹ ಮಾಡುತ್ತಿದ್ದಾರೆ ಅಂದರೆ ಡಿಸಿಯವರಿಗೆ ಆ ಕುರಿತು ವಿಚಾರಣೆ ಮಾಡಿ ರಿಪೋರ್ಟ್ ಕಳುಹಿಸಿ ಎಂದು ಸೂಚನೆ ಕೊಡುತ್ತೇನೆ.

ಅಧ್ಯಕ್ಷರು:- ಸದನದ ಯಾವುದೇ ಸದಸ್ಯರು ಈ ತರಹದ ಪ್ರಶ್ನೆಗಳನ್ನು ಕೇಳಿದಾಗ, ನಿರ್ದಿಷ್ಟವಾದ ಪ್ರಕರಣಗಳನ್ನು ನಿಮ್ಮ ಗಮನಕ್ಕೆ ತಂದಾಗ, ತತ್‌ಕ್ಷಣ ಅದರ ಆಧಾರದ ಮೇಲೆ ನೀವು ಕ್ರಮ ತೆಗೆದುಕೊಳ್ಳದಿದ್ದರೆ, ನಾಳೆ ಇಂಥ ಶಾಸಕರು ಪ್ರಶ್ನೆ ಕೇಳುತ್ತಾರೆ. ತಪ್ಪು ಮಾಡಿದರೆ ಶಾಸಕರ ಗಮನಕ್ಕೆ ಬಂದರೆ ನಮಗೆ ಶಿಕ್ಷೆಯಾಗುತ್ತದೆ ಎಂಬ ಭಯ ಬರುತ್ತದೆ ಮತ್ತು ಅದರ ಮೂಲಕ ಆಡಳಿತವು ಸುಧಾರಿಸುತ್ತದೆ. ಸದನದ ಗೌರವ ಕೂಡ ಹೆಚ್ಚಾಗುತ್ತದೆ. ಎಲ್ಲಿ ಸದಸ್ಯರು ಗಮನಕ್ಕೆ ತರುತ್ತಾರೆ ಅದರ ಮೇಲೆ ತತ್‌ಕ್ಷಣ ಕ್ರಮ ತೆಗೆದುಕೊಳ್ಳಿ. ಶಾಸಕರ ಬಗ್ಗೆಯೂ ಅಧಿಕಾರಿಗಳಿಗೆ ಸ್ವಲ್ಪ ಭಯ ಉಂಟಾಗುತ್ತದೆ.

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್:- ಆಯಿತು, ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆಯನೂರು ಮಂಜುನಾಥ್:- ಇವರ ಆಜ್ಞೆ ಬಂದ ಮೇಲೆ ಆ ರೀತಿಯಾಗಿ ಹಣ ಸಂಗ್ರಹಣೆ ಆಗಬೇಕಾದರೆ, ಲೋಕಾಯುಕ್ತದ ದಾಳಿ ಮೂಲಕ ಸಾಬೀತು ಆಗಬೇಕಾದರೆ, ಆ ರೀತಿಯ ಆಪಾದನೆ ಬಂದವರನ್ನು ಕೂಡಲೇ ಅಮಾನತ್ತಿನಲ್ಲಿಡಿ.

ಅಧ್ಯಕ್ಷರು:- ಮಂಜುನಾಥರವರೇ, ಇದನ್ನು ಈ ರೀತಿಯಾಗಿ ಮಾಡಿಕೊಳ್ಳೋಣ. ತಾವು ಮಂತ್ರಿಯವರನ್ನು ಭೇಟಿ ಮಾಡಿ ವಿವರಗಳನ್ನು ಕೊಡಿ. ಆ ಮೇಲೆ ನಾನೂ ಕೂಡ ಅವರ ಹತ್ತಿರ ಚೆಕ್‌ಅಪ್ ಮಾಡಿಸಿಕೊಳ್ಳುತ್ತೇನೆ. We will ask him to take immediate action. ಅಂಥವರನ್ನು ಅಮಾನತ್ತಿನಲ್ಲಿಡಲು ಏನು ಖರ್ಚಾಗುತ್ತದೆ?

ಶ್ರೀ ಕೆ.ಎಸ್.ಈಶ್ವರಪ್ಪ:- ಅಲ್ಲಿಯ ತನಕ ಹಣ ಸಂಗ್ರಹಣೆಗೆ ಅವಕಾಶ ಬೇಕು. ಇಲ್ಲವಾದರೆ ಮುನ್ಸಿಪಾಲಿಟಿಗಳು ನಿಂತು ಹೋಗುತ್ತವೆ. ಮುನ್ಸಿಪಾಲಿಟಿಗಳಿಗೆ ನೆಮ್ಮಿನ್ಯೂ ಬರುವುದಿಲ್ಲ. ಸರಕಾರ ಅವರಿಗೆ ಹಣವನ್ನು ಕೊಡುವುದಿಲ್ಲವಾದರೆ ಮುನ್ಸಿಪಾಲಿಟಿಗಳು ಕೆಲಸ ಮಾಡುವುದು ಹೇಗೆ? ಅದಕ್ಕೋಸ್ಕರ ಮನೆಗಳಿಗೆ 10 ಪರ್‌ಸೆಂಟ್, ಕಮರ್ಷಿಯಲ್ ಬಿಲ್ಡಿಂಗ್‌ಗಳಿಗೆ 20 ಪರ್‌ಸೆಂಟ್ ಜಾಸ್ತಿ ಮಾಡಿ, ಇಡೀ ರಾಜ್ಯದಲ್ಲಿ ಹಣಸಂಗ್ರಹಣೆ ಮಾಡಿದರೆ ಮುನ್ಸಿಪಾಲಿಟಿಗಳಿಗೆ ಅನುಕೂಲವಾಗುತ್ತದೆ. ಆ ಒಂದು ಆದೇಶವನ್ನು ಕೊಡುತ್ತೀರೋ?

ಅಧ್ಯಕ್ಷರು:- ಅದನ್ನು ಅವರು ಆಲೋಚನೆ ಮಾಡಿ ಹೇಳಬೇಕಾಗುತ್ತದೆ. ಇದು ಪಾಲಿಸಿ ಮ್ಯಾಟರ್.

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್:- ಅಸೆಸ್‌ಮೆಂಟ್ ಮಾಡಿ ಅದರ ಪ್ರಕಾರ ಏನು ಬರುತ್ತದೆಯೋ ಹಾಗೆ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ಸದಸ್ಯರು ಹೇಳಿದ ವಿಚಾರ ಹೊಸದು. ಪಾಲಿಸಿ ಮೇಟರ್ ಆಗಿರುವುದರಿಂದ ಸಚಿವಸಂಪುಟದಲ್ಲಿ ಚರ್ಚೆ ಮಾಡಿ ಮಾಡಬೇಕಾಗುತ್ತದೆ. ನೀವು ಹೇಳಿರುವುದು ಒಂದು ಏಕರೂಪವಾದ ನಿಯಮವನ್ನು ಮಾಡಬಹುದು, ಆ ರೀತಿಯಲ್ಲಿ ರಾಜ್ಯದಾದ್ಯಂತ ವಸೂಲಿ ಮಾಡತಕ್ಕಂಥಾದ್ದು. ಏಕಾಏಕಿಯಾಗಿ ಕೇಳಿದ್ದೀರಿ, ಅವರಿನ್ನೂ

ಹೊಸಬರಿದ್ದಾರೆ. Let us co-operate with him. Let him go back to the Cabinet. ಸಂಪುಟದಲ್ಲಿ ಚರ್ಚೆ ಮಾಡಿಕೊಂಡು ಬಂದು ಹೇಳುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಶಿವಮೊಗ್ಗದಲ್ಲಿ ಕಳೆದ ಏಳು ವರ್ಷಗಳಿಂದ ಮನೆಗಂದಾಯವನ್ನು ವಸೂಲು ಮಾಡುತ್ತಾ ಇಲ್ಲ. ಹಾಗಾದರೆ ಮುನ್ಸಿಪಾಲಿಟಿಗಳು ಹೇಗೆ ನಡೆಯಬೇಕು? ಇವೊತ್ತು ಇಡೀ ರಾಜ್ಯದಲ್ಲಿ ಏಕರೂಪದ ನಿಯಮವನ್ನು ಮಾಡಲು ಕಮಿಟಿಯನ್ನು ಮಾಡಿದರು. ಆ ಕಮಿಟಿಯನ್ನು ಯಾವಾಗ ನೇಮಕ ಮಾಡುತ್ತಾರೆ? ಅವರು ಯಾವಾಗ ಆ ಸೂತ್ರಗಳನ್ನು ಕೊಡುವುದು? ಮುನ್ಸಿಪಾಲಿಟಿಯವರು ಯಾವಾಗ ಮನೆಗಂದಾಯವನ್ನು ವಸೂಲು ಮಾಡುವುದು? ಹೀಗೆ ವಿಳಂಬವಾದರೆ ಮುನ್ಸಿಪಾಲಿಟಿಗಳು ಬದುಕುವುದು ಹೇಗೆ? ಅದಕ್ಕೋಸ್ಕರವಾಗಿ ನಗರಸಭೆ ಮತ್ತು ಪುರಸಭೆಗಳಿಗೆ ಹಣಸಂಗ್ರಹಣೆ ಮಾಡಲು ಒಂದು ನೀತಿ ಬೇಕಾಗಿದೆ. ಇವರು ಏನೋ ಕಂದಾಯ ಸಂಗ್ರಹಣೆಯನ್ನು ನಿಲ್ಲಿಸಿಬಿಟ್ಟರು. ಅದರ ಮೂಲಕ ಭ್ರಷ್ಟಾಚಾರ ನಿಂತಿತು. ಆದರೆ ಮುನ್ಸಿಪಾಲಿಟಿಗಳಿಗೆ, ನಗರಸಭೆ, ಪುರಸಭೆಗಳಿಗೆ ಹಣ ಬರಬೇಕಲ್ಲ? ಆದ್ದರಿಂದ ಸದ್ಯಕ್ಕೆ ತಾತ್ಕಾಲಿಕವಾಗಿ 10 ಮತ್ತು 20 ಪರ್‌ಸೆಂಟ್ ಜಾಸ್ತಿ ಮಾಡಿ ವಸೂಲು ಮಾಡಲು ಆದೇಶವನ್ನು ನೀಡಿ.

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್:- ಸಂಬಂಧಪಟ್ಟವರೊಡನೆ ಚರ್ಚೆ ಮಾಡಿ ಸೂಕ್ತ ಕ್ರಮವನ್ನು ಸಕಾಲಿಕವಾಗಿ ತೆಗೆದುಕೊಳ್ಳುತ್ತೇನೆ.

ವಿಷಯ:- ಬೆಳಗಾಂ ಮತ್ತು ಖಾನಾಪುರ ತಾಲ್ಲೂಕಿನಲ್ಲಿ ಅರೆಯದ ಕಬ್ಬಿನ ಪ್ರಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 73 (413)

ಶ್ರೀ ಬಿ.ಐ.ಪಾಟೀಲ್ (ಉಚಗಾವ್):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಪ್ರಸಕ್ತ ವರ್ಷದಲ್ಲಿ ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿಯ ಒಟ್ಟು ಕಬ್ಬಿನ ಉತ್ಪಾದನೆ ಎಷ್ಟು?

ಆ) ಇಲ್ಲಿಯವರೆಗೆ ಸಮಯಕ್ಕೆ ಸರಿಯಾಗಿ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು?

ಇ) ಇನ್ನೂ ಅರೆಯಬೇಕಾದ ಕಬ್ಬಿನ ಪ್ರಮಾಣವೆಷ್ಟು?

ಈ) ಇದನ್ನು ಕೂಡಲೇ ಅರೆಯುವಂತಾಗಲು ಸರ್ಕಾರ ಕೈಗೊಂಡ ಕ್ರಮವೇನು?

ಉ) ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಕಬ್ಬನ್ನು ಅರೆಯದಿರುವುದರಿಂದ ರೈತರಿಗೆ ಉಂಟಾಗಿರುವ ನಷ್ಟವೆಷ್ಟು?

ಊ) ಇದಕ್ಕಾಗಿ ಸರ್ಕಾರವು ಪರಿಹಾರ ನೀಡಲು ಉದ್ದೇಶಿಸಿದೆಯೇ? ಇಲ್ಲದಿದ್ದಲ್ಲಿ